Reg No. B G 155 6-8-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳೀಯವಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ. ಸೆ

ನಿರುದ್ಯೋಗ ನಿವಾರಣೆಗೆ ವೀರೇಂದ್ರ ಪಾಟೀಲರ ಕರೆ

ದಿವ್ಯವಾಣಿ

ಮೃದು ವಚನವೇ ಸಕಲ ಜಪಂಗಳಯ್ಯ.
— ಬಸವೇಶ್ವರರು.

ಗಡಿ ವ್ಯಾಜ್ಯ ಬೇಗ ಬಗೆಹರಿಯಲು

ಬೊಂಬಾಯಿ— ಮಹಾರಾಷ್ಟ್ರ—ಮೈಸೂರು ಗಡಿ ವ್ಯಾಜ್ಯ ಬೇಗ ಇತ್ಯರ್ಥವಾಗಲು ಒತ್ತಾಯಕ್ಕಾಗಿ ನವೆಂಬರು 1 ರಂದು ಮಹಾರಾಷ್ಟ್ರ ಒಂದಾಗಿ ಸಂಪೂರ್ಣ ಮಹಾರಾಷ್ಟ್ರ ಸಮಿತಿ ಕರೆಕೊಡಲು ನಿರ್ಧರಿಸಿದೆ.

●

ಅಪೊಲೋ 11 ಅಂಜೀ ಪೆಟ್ಟಿಗೆ

ಮೈಸೂರು— ಗಾಂಧಿ ಜೌಳದಲ್ಲಿ ಪ್ರತಿಷ್ಠಿತವಾದ ಕಂಬದ ಅಂಜೀಪೆಟ್ಟಿಗೆಯೊಂದಕ್ಕೆ ಅಪೊಲೋ 11 ಎಂದು ಹೆಸರಿಡಲಾಯಿತು.

★

ಜೆಂಗಳೂರು— ರಾಜ್ಯಾದ್ಯಂತ ತಾ || 13 ರಿಂದ ವಿದ್ಯುತ್ ಮಂಡಲಿ ಕೆಲಸಗಾರರು ಚಳವಳ ಆರಂಭಿಸಲು ಕೇಂದ್ರ ಕಾರ್ಯ ಸಮಿತಿ ನಿರ್ಧರಿಸಿದೆ

ಬಂಗಾಳ ಸರಕಾರ ವಜಾವಿಲ್ಲ

ನವದೆಹಲಿ— ಪಶ್ಚಿಮ ಬಂಗಾಳದಲ್ಲಿ ಈಚಿನ ಪೋಲೀಸರ ಪುಂಡಾಟಿಕೆಯಿಂದ ಶಾಂತಿ ಶಿಸ್ತು ಭಗ್ನವಾಗಿ ಸಂವಿಧಾನ ವ್ಯವಸ್ಥೆ ಕುಸಿದಿದೆಯಾಗಿ ಪಶ್ಚಿಮ ಬಂಗಾಳ ಸರಕಾರವನ್ನು ವಜಾ ಮಾಡಬೇಕೆಂದು ರಾಜ್ಯ ಸಭೆಯಲ್ಲಿ ತಂದ ಸಲಹೆಯು ತಿರಸ್ಕರಿಸಲ್ಪಟ್ಟಿತು.

★

ಮೊಖದ್ದಮೆ ವಜಾ

ನವದೆಹಲಿ— ಪೂರಿ ಶಂಕರಾಚಾರ್ಯರಿಗೆ ಅವಮಾನ ಮಾಡಿದ ಆಪಾದನೆಗೆ ಲೋಕಸಭಾ ಮಾಜಿ ಸ್ಪೀಕರು ಶ್ರೀ ಸಂಜೀವರೆಡ್ಡಿ ಮತ್ತಿತರ ನಾಲ್ಕು ಮಂದಿ ಪಾರ್ಲಿಮೆಂಟು ಸದಸ್ಯರ ಮೇಲೆ ಅವರ ಶಿಷ್ಯರು ಆರು ಮಂದಿ ಹಾಕಿದ್ದ ರೂ 26000 ಪರಿಹಾರ ಮೊಖದ್ದಮೆಯನ್ನು ಡೆಲ್ಲಿ ಹೈ ಕೋರ್ಟು ವಜಾಮಾಡಿದೆ.

★

ಮೆಣಸಿನ ರಫ್ತು ತಗ್ಗಿದೆ

ಭಾರತದ ಮೆಣಸಿನ ವ್ಯಾಪಾರ ವಿಶ್ವದ ಮಾರುಕಟ್ಟೆಯಲ್ಲಿ ತಗ್ಗಿದಂತಿದೆ. 67–68 ಸಾಲಿಗಿಂತ 68–69 ರಲ್ಲಿ ರಫ್ತು 6000 ಟ ಕಡಮೆಯಾಗಿದೆ.

ತಾ. 8–8–69 ನೇ ಶುಕ್ರವಾರದಿಂದ ಅಮೋಘ
... ದಿನ 3 ಪ್ರದರ್ಶನಗಳು .... ಪ್ರಾರಂಭ
ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ : 2–30. 6 ಮತ್ತು 9–30 ಕ್ಕೆ ದಿನ : 3, 6–30, 10 ಕ್ಕೆ
ವೀನಸ್ ಬ್ರದರ್ಸ್‌ರವರ ನಾಗಿ (ಕಲರ್‌ನಲ್ಲಿ)
ಪಾತ್ರ– ರಾಜೇಂದ್ರಕುಮಾರ್, ವೈಜಯಂತಿಮಾಲಾ, ಸಿಮ್ಮಿ, ಸಂಜೀವ್‌ಕುಮಾರ್
ಸಂಗೀತ : ನೌಷಾದ್ ನಿರ್ದೇಶನ : ಶ್ರೀಧರ್
ತಾ || 15–8–69 ರಿಂದ — — — ಶ್ರೀ ಟಾಕೀಸಿನಲ್ಲಿ
SHAGIRD [New Print)

ಮುಷ್ಕರ

ಹುಬ್ಬಳ್ಳಿ— ತಮ್ಮ ಕೇಳಿಕೆಗಳು ನೆರವೇರಲು ರಾಜ್ಯದ ಸುಮಾರು 1000 ಹೌಸ್ ಸರ್ಜನ್ನರು ತಾ || 14 ರಿಂದ ಮುಷ್ಕರ ಹೂಡಲು ನಿರ್ಧರಿಸಿರುವರು.

★

ಸಹಸ್ರಾರು ಟನ್ ಗೋಧಿ ಕೆಡುತ್ತಿದೆ

ಬೊಂಬಾಯಿ— ವಿದೇಶೀ ವಿನಿಮಯದಲ್ಲಿ ಕೋಟ್ಯಾಂತರ ರೂಪಾಯಿಗಳಿಗೆ ತಂದ ಅನೇಕ ಸಹಸ್ರ ಟನ್ ಗೋಧಿ ಮತ್ತು ಮಿಲೋ ಬೊಂಬಾಯಿನಲ್ಲಿ ಹಡಗು ನಿಲ್ದಾಣವ್ಯವಸ್ಥೆಯಲ್ಲಿ ಬಿದ್ದಿದ್ದು ಕೆಡುತ್ತಾ ದುರ್ವಾಸನೆ ಬೀರುತ್ತಿದೆ ; ಹೆಚ್ಚು ಮಳೆಬಿದ್ದು ಇದರ ಪರಿಸ್ಥಿತಿ ಮತ್ತೂ ಕೆಡುತ್ತಿದೆ.

★

ಸಮುದ್ರದ ಗೋಡೆ ಕುಸಿತ

ತಲಚೇರಿ— ತಲಾಯ್ ಸಮುದ್ರ ಅಂಚಿನಲ್ಲಿರುವ 640 ಮಾಟರು ಉದ್ದದ ಸಮುದ್ರ ಗೋಡೆ ಕೊಚ್ಚಿಹೋಗಿದೆ - ಈ ಗೋಡೆಯನ್ನು 10 ವರ್ಷಗಳ ಹಿಂದೆ ರೂ 10 ಲಕ್ಷ ಖರ್ಚಿನಲ್ಲಿ ಕಟ್ಟಲ್ಪಟ್ಟಿತ್ತು.

★

ಬಡತನ, ನಿರುದ್ಯೋಗ

ಗುಲ್ಬರ್ಗ— ಗ್ರಾಮಗಳಲ್ಲಿ ಹೆಚ್ಚುತ್ತಿರುವ ಬಡತನ ಮತ್ತು ನಿರುದ್ಯೋಗ ನಿವಾರಣೆಗೆ ಸಕಲರೂ ಪ್ರಯತ್ನಿಸಬೇಕು ಎಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

★

ನಷ್ಟ – ಲಾಭ

ನವದೆಹಲಿ— ಸರಕಾರದ ಕೈಗಾರಿಕೆಗಳಲ್ಲಿ 67–68 ರಲ್ಲಿ 24 ಸಂಸ್ಥೆಗಳಲ್ಲಿ ರೂ 83 ಕೋಟಿ ನಷ್ಟವೂ, 31 ರಲ್ಲಿ ರೂ 48 ಕೋಟಿ ಲಾಭವೂ ಆಗಿರುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಕುದುರೆಯವರಿಗೆ ಪರಿಹಾರ

ಬೆಂಗಳೂರು— ಅಗ್ನಿ ಅನಾಹುತದಲ್ಲಿ ಕುದುರೆಗಳನ್ನು ಕಳೆದುಕೊಂಡ ಟ್ರೇನರುಗಳಿಗೆ ಕುದುರೆಯೊಂದಕ್ಕೆ ರೂ. 2500 ಪರಿಹಾರ ನೀಡಲು ಟರ್ಫ್ ಕ್ಲಬ್ ನಿರ್ಧರಿಸಿದೆ. ಇನ್ಷೂರ್ಮಾಡಿದ್ದ ಕುದುರೆಗಳನ್ನು ಕಳೆದುಕೊಂಡ ಮಾಲೀಕರಿಗೆ ಅವುಗಳ ಮಾಲೀಕರಿಗೆ ಅವುಗಳ ತರಗತಿ ಮೇಲೆ ರೂ 40000 ರಿಂದ 20000 ಕೊಡಲು ನಿರ್ಧರಿಸಲಾಗಿದೆ.

★

ಚಂದ್ರನಲ್ಲಿ ಹೋಗುವ ಬಯಕೆ

ಬೊಂಬಾಯಿ— ತಮ್ಮನ್ನು ಚಂದ್ರನಲ್ಲಿಗೆ ಕರೆದುಕೊಂಡುಹೋಗಿಬೇಕೆಂದು ಇಂಡಿಯನ್ ಏರ್‌ಲೈನ್ಸನ್ನು ಅನೇಕರು ಕೇಳುತ್ತಿದ್ದಾರೆ – ಒಬ್ಬ ಯುವಕ ತಾನು ಅಲ್ಲಿ ಮಧುಚಂದ್ರ ಕಳೆಯಬೇಕೆಂದಿದ್ದಾನೆ – ಒಬ್ಬ ಹುಡುಗಿ ತನ್ನೊಡನೆ ಒಂದು ಜೊತೆ ಎತ್ತು ತೆಗೆದುಕೊಂಡುಹೋಗಿ ಅಲ್ಲಿ ವ್ಯವಸಾಯ ಮಾಡಬೇಕೆಂದಿದ್ದಾಳೆ.

★

ಮಂತ್ರಿಗಳೇ ಸತ್ಯಾಗ್ರಹ ಮುಂದಾಳು

ತಿರುವೆಂಡ್ರಂ— ನೌಕರರನ್ನು ತೆಗೆದುಹಾಕುವದನ್ನು ಪ್ರತಿಭಟಿಸಿ, ಪೋಸ್ಟ ಮಾಸ್ಟರು ಜನರಲ್ ಆಫೀಸಿನ ಮುಂದೆ ನಡೆದ ಸ್ವಯಂಸೇವಕರ ಸತ್ಯಾಗ್ರಹದಲ್ಲಿ ಕೇರಳ ಕಾರ್ಮಿಕ ಮಂತ್ರಿ ಶ್ರೀ ಮಾಥಾಯಿ ಮಂಜೂರಾನ್ ಮುಂದಾಳತ್ವ ವಹಿಸಿದ್ದರು.

●

ಗುರು ನಾನಕ್‌ರ 500 ನೇ ಜನ್ಮೋತ್ಸವ

ಪಾಟ್ನಾ— ಗುರು ನಾನಕ್‌ರ 500 ನೆ ಜನ್ಮೋತ್ಸವವು ವಿಶ್ವದಾದ್ಯಂತ ನವೆಂಬರಿನಲ್ಲಿ ನಡೆಯುವದೆಂದು ಪ್ರಬಂಧಕ ಸಮಿತಿ ಕಾರ್ಯದರ್ಶಿ ಹೇಳಿದರು.

★

ಜಿಲ್ಲ ಪತ್ರಿಕೋದ್ಯೋಗಿಗಳ ಸಮ್ಮೇಳನ

ಮೈಸೂರು ಜಿಲ್ಲ ಪತ್ರಿಕೋದ್ಯೋಗಿಗಳ ನಾಲ್ಕನೇ ಅಧಿವೇಶನವನ್ನು ವಾರ್ತಾ ಹಂಗೂ ಕೈಗಾರಿಕಾಮಂತ್ರಿ ಶ್ರೀ ಎಂ ರಾಜಶೇಖರಮೂರ್ತಿಯವರು 3ರಂದು ಆರಂಭಿಸುತ್ತಾ, ಜಿಲ್ಲ ಕೇಂದ್ರಗಳ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿನ ಸಣ್ಣ ಪತ್ರಿಕೆಗಳ ಪಾತ್ರ ಪ್ರಜಾಪ್ರಭುತ್ವದಲ್ಲಿ ಪ್ರಧಾನ ಆದುದೆಂದು ನುಡಿದರು ಸಮ್ಮೇಳನ ಮೈಸೂರು ಪುರಭವನದಲ್ಲಿ ನಡೆಯಿತು

ಪ್ರತಿಭಾಶಾಲಿಯಾದ ಸಣ್ಣ ಪತ್ರಿಕೆಗಳು ಮೈಸೂರು ನಗರದಲ್ಲಿರುವುದಾಗಿ ಮಂತ್ರಿಯವರು ಹೇಳಿ ಅವು ಸಂಖ್ಯೆಯಲ್ಲೂ ಹೆಚ್ಚಾಗಿದೆ ಎಂದರು

ಸಣ್ಣ ಪತ್ರಿಕೆಗಳಿಗೆ ಸಹಾಯ ಮಾಡಲು ಸರ್ಕಾರ ಕೆಲವಾರು ಕ್ರಮಗಳನ್ನು ಕೈಗೊಂಡಿದೆ ಎಂದು ಅವರು ನುಡಿದರು

ಸಮ್ಮೇಳನದ ಸಂಸ್ಮರಣ ಸಂಚಿಕೆಯನ್ನು ಪುರಸಭೆ ಅಧ್ಯಕ್ಷ ಶ್ರೀ ಎಂ ಎ ತಿಮ್ಮಯ್ಯನವರು ಬಿಡುಗಡೆ ಮಾಡಿದರು

ಪತ್ರಿಕೋದ್ಯಮವಲ್ಲಿ ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆ ಮಾಡಬೇಕೆಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಮ್ಮೇಳನ ಕರೆನೀಡಿದೆ

ಪತ್ರಿಕೋದ್ಯೋಗಿಗಳ ಸಹಾಯ ನಿಧಿ ಸ್ಥಾಪನೆಗೆ ಸಮ್ಮೇಳನ ನಿರ್ಧರಿಸಿತು

ದಿವಂಗತ ಡಾ|| ಜಾಕೀರ್ ಹುಸೇನ್ ಹಾಗೂ ಶ್ರೀ ಹೆಚ್ ಹೊಂಬೇಗೌಡರ ನಿಧನಕ್ಕಾಗಿ ಸಮ್ಮೇಳನ ಸಂತಾಪಿಸಿತು

ಶ್ರೀ ಎ ಎ ಶಾಸ್ತ್ರಿಯವರು ಸಮ್ಮೇಳನ ಅಧ್ಯಕ್ಷತೆ ವಹಿಸಿದ್ದರು

ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎ ರಾಮಣ್ಣನವರು ಸ್ವಾಗತಿಸಿದರು ಕಾರ್ಯದರ್ಶಿ ಶ್ರೀ ಹೆಚ್ ಎಲ್ ಶ್ರೀಕಂಠಮೂರ್ತಿಯವರು ವಂದಿಸಿದರು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja Mysore and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಶುಕ್ರವಾರದಿಂದ 2ನೇವಾರ
ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 4ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ವಾಣಿಜ್ಯದಲ್ಲಿ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4